**ಓ ಎಸ್ ನಂ. 347/2013 ದಿಃ 26-09-2019. ಡಿ.ಡಬ್ಲ್ಯೂ.1.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ- ಪ್ರತಿವಾದಿಯ ಪರ ವಕೀಲರಾದ**
**ಶ್ರೀ. ಎಂ.ಎಸ್.ಜಿ. ಃ ವಕೀಲರಿಂದ ಃ-**

ನಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ಎಲ್ಲಾ ಸಂಗತಿಗಳು ಸತ್ಯವಾಗಿದ್ದು, ಅವುಗಳನ್ನು ಓದಿ, ತಿಳಿದು ಸಹಿ ಮಾಡಿರುತ್ತೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಒಂದು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.1 ಎಂದು, ಎಂ.ಆರ್.ನಂ.ಹೆಚ್.13/16-17 ರ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.2 ಎಂದು, ಒಂದು ಪಟ್ಟಾಪುಸ್ತಕವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.3 ಎಂದು, ದಿಃ 16.07.1973 ರ ನೊಂದಣಿಯಾದ ಮೃತ್ಯುಪತ್ರವು ವಾದಿಯ ತಂದೆಯ ಸ್ವಾಧೀನದಲ್ಲಿರುವುದರಿಂದ ಸದರಿ ಮೃತ್ಯುಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.4 ಎಂದು, ದಿಃ 10.04.2015 ರ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.5 ಎಂದು, ದಿಃ 17.08.2009 ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.6 ಎಂದು, ದಿಃ 01.08.1994 ರ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.7 ಎಂದು, ದಿಃ 28.07.2019 ರ ಸ್ವೀಕೃತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.8 ಎಂದು, ವಾದಿಯ ತಂದೆ ತಾಯಿಯ ಹೇಳಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.9 ಎಂದು, ಒ.ಎಸ್.ನಂ.203/2015 ರಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ:1 ರ ಮೇಲಿನ ದಿಃ 14.07.2017 ರ ಆದೇಶ, ಮಧ್ಯಂತರ ಅರ್ಜಿ ಸಂಖ್ಯೆ:1, ತಕರಾರು, ಮಧ್ಯಂತರ ಅರ್ಜಿ ಸಂಖ್ಯೆ:7 ರ ಮೇಲಿನ ಆದೇಶ, ಮಧ್ಯಂತರ ಅರ್ಜಿ ಸಂಖ್ಯೆ:7,

ತಕರಾರುಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ.10 ರಿಂದ 15 ಎಂದು, ಎಂ.ಎ.ನಂ.5/17 ರ ಅಪೀಲು ಮೆಮೊ, ತಕರಾರು ಮತ್ತು ಆದೇಶದ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ.16 ರಿಂದ 18 ಎಂದು, ದಿಃ 10.08.2018 ರ ಉಪನೊಂದಣಾಧಿಕಾರಿಗಳು ನೀಡಿರುವ ಮಾಹಿತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ.19 ಎಂದು ಗುರುತಿಸಲಾಯಿತು. ನಿಡಿ.7 ಮತ್ತು 19ನ್ನು ವಾದಿಗಳ ಪರ ವಕೀಲರ ತಕರಾರಿಗೊಳಪಟ್ಟು ಗುರುತಿಸಲಾಯಿತು.

**( ಮುಂದುವರದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು. )**

**ಓ ಹೇಳಿ ಕೇಳಿ ಸರಿ ಇದೆ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ, ಗುಬ್ಬಿ**